ಮಂಗಳವಾರ, ಏಪ್ರಿಲ್ 3, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 92 | ಪುಟ 20 + 2
www.prajavani.net
/prajavani.net
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
CENTRAL LIBRARY
ಕರ್ನಾಟಕ ದರ್ಶನ
ಬನ್ನಿ, ದನದ ಸಂತಿ ಮಾಡೂಣು!
ಮದುವೆ ಮಂಟಪದಲ್ಲಿ ವಧುವಿನ ಮೇಲೆ ಹಲ್ಲೆ 5
ಮೃತದೇಹಗಳ ಅವಶೇಷ ಭಾರತಕ್ಕೆ 7

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,255 | 10,211 | ₹30,776 (ಬೆಂಗಳೂರು) | ₹38,800 (ಬೆಂಗಳೂರು) | 65 |

# ಹ್ಯಾಂಡ್‌ಬಾಲ್ ಟೂರ್ನಿ: ಸಹ್ಯಾದ್ರಿ ಚಾಂಪಿಯನ್




ಮಂಗಳೂರು: ಶಿವಮೊಗ್ಗದ ಜೆಎನ್‌ಎನ್‌ಸಿಇಇಯಲ್ಲಿ ನಡೆದ ವಿಟಿಯು ಅಂತರ ವಲಯ ಮಹಿಳಾ ಹ್ಯಾಂಡ್‌ಬಾಲ್ ಟೂರ್ನಿಯಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿದ್ಯಾರ್ಥಿನಿಯರು ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಸಾತ್ವಿಕಾ ಜೆ. ರಾಯ್ ನೇತೃತ್ವದ ತಂಡದಲ್ಲಿ ಶ್ರೀಲಕ್ಷ್ಮಿ, ಅನನ್ಯಾ ಎ.ಶೆಟ್ಟಿ, ಕೃಪಾ ಎಸ್.ಆರ್., ಸ್ವಾತಿ, ಗೌರಿ ಗಣೇಶ್, ಪ್ರತಿಭಾ ಭಟ್, ಬಿಂದಿಯಾ ಮೆಂಡನ್, ರಕ್ಷಿತಾ, ಸಮೀಕ್ಷಾ, ಸಲೀಖಾ ಶಮಾ, ಮನೀಶಾ ಎ., ಅನುರಾಧಾ ಇದ್ದರು.

ವಿಜೇತ ತಂಡವನ್ನು ಭಂಡಾರಿ ಫೌಂಡೇಶನ್ ಅಧ್ಯಕ್ಷ ಡಾ. ಮಂಜುನಾಥ್ ಭಂಡಾರಿ, ಸಹ್ಯಾದ್ರಿ ಶೈಕ್ಷಣಿಕ ಸಂಸ್ಥೆಗಳ ನಿರ್ದೇಶಕ ಡಾ.ಡಿ. ಎಲ್. ಪ್ರಭಾಕರ ಮತ್ತು ಕಾಲೇಜಿನ ಪ್ರಾಂಶುಪಾಲ ಡಾ.ಉಮೇಶ್ ಎಂ. ಭುಶಿ ಅಭಿನಂದಿಸಿದ್ದಾರೆ.

ಮಂಗಳವಾರ, ಏಪ್ರಿಲ್ 3, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 92 | ಪುಟ 20 + 2
www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY
Mangalore - 7

ಕರ್ನಾಟಕ ದರ್ಶನ
ಬರ್ರಿ, ದನದ ಸಂತಿ ಮಾಡೂಣು!

ಮದುವೆ ಮಂಟಪದಲ್ಲಿ ವಧುವಿನ ಮೇಲೆ ಹಲ್ಲೆ 5
ಮೃತದೇಹಗಳ ಅವಶೇಷ ಭಾರತಕ್ಕೆ 7

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 33,255 | 10,211 | ₹30,776 (ಬೆಂಗಳೂರು) | ₹38,800 (ಬೆಂಗಳೂರು) | 65 |



ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದ ಬ್ರಹ್ಮೋಸ್ ಏರೋಸ್ಪೇಸ್‌ನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಸುಧೀರ್‌ಕುಮಾರ್ ಮಿಶ್ರ, ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು.

## ಜೀವನದಲ್ಲಿ ಹೊಸತನ ರೂಢಿಸಿಕೊಳ್ಳಿ

ಮಂಗಳೂರು: ರಾಷ್ಟ್ರದ ಆದಾಯ ಮತ್ತು ಸಂಪನ್ಮೂಲಗಳನ್ನು ಸೃಷ್ಟಿಸಲು ಇನ್ನೋವೇಶನ್ ಮುಖ್ಯವಾಗಿದೆ ಎಂದು ಬ್ರಹ್ಮೋಸ್ ಏರೋಸ್ಪೇಸ್‌ನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಸುಧೀರ್‌ಕುಮಾರ್ ಮಿಶ್ರ ಹೇಳಿದರು.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕ್ಷಿಪಣಿ ತಜ್ಞ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜೊತೆಗೂಡಿ ಮಾಡಿದ ಕೆಲಸಗಳ ಬಗ್ಗೆ ಅನುಭವಗಳನ್ನು ಹಂಚಿಕೊಂಡ ಅವರು, ಅಬ್ದುಲ್ ಕಲಾಂ ತಂಡದಲ್ಲಿ ಕೆಲಸ ಮಾಡಲು ಹೇಗೆ ತಮ್ಮನ್ನು ಹುರಿದುಂಬಿಸಿದ್ದಾರೆ ಎಂಬುದನ್ನು ವಿವರಿಸಿದರು.

ವಿದ್ಯಾರ್ಥಿಗಳು ಹೊಸತನದ ಗುರಿಯಿಂದ ಉತ್ತಮ ಆದರ್ಶ ವ್ಯಕ್ತಿಯಾಗಬೇಕು. ಯುವಕರು ಹೊಸತನವನ್ನು ಸೃಷ್ಟಿಸಲು ಸಹ್ಯಾದ್ರಿ ಕಾಲೇಜು ಉತ್ತಮ ವಾತಾವರಣವನ್ನು ಸೃಷ್ಟಿಸಿದೆ ಎಂದು ಹೇಳಿದರು.

ನಾವು ಶ್ರೇಷ್ಠತೆಗಾಗಿ ಹೊಸ ಹಾದಿ ಹಿಡಿಯಬೇಕು. ಅಂತಿಮವಾಗಿ ಯುವ ಪೀಳಿಗೆಗೆ ಸ್ಫೂರ್ತಿದಾಯಕವಾಗಿ ರಾಷ್ಟ್ರಕ್ಕೆ ಉತ್ತಮ ಹೆಸರು ತರಬೇಕು ಎಂದು ಸಲಹೆ ನೀಡಿದರು.

ಕಾಲೇಜ್ ಕ್ಯಾಂಪಸ್‌ಗೆ ಭೇಟಿ ನೀಡಿದ ಅವರು, ನವೀನ ಪ್ರಯೋಗಾಲಯಗಳು, ಆಂತರಿಕ ಆರಂಭಗಳು ಮತ್ತು ಸಹ್ಯಾದ್ರಿ ವಿದ್ಯಾರ್ಥಿ ಕೇಂದ್ರಿತ ಉಪಕ್ರಮಗಳನ್ನು ವೀಕ್ಷಿಸಿದರು. ಸಹ್ಯಾದ್ರಿ ತನ್ನ ನವೀನ ಕೇಂದ್ರದ ಕಲ್ಪನೆಯನ್ನು ಮೀರಿಸಿದೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಡಾ.ಯು.ಎಂ. ಭುಶಿ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.